ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 668 |
| ಸದಸ್ಯರ ಹೆಸರು | : | ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 12–07–2023 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಮಂಡ್ಯ ಜಿಲ್ಲೆ ವ್ಯಾಪ್ತಿಯಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು; ಈ ಹೆದ್ದಾರಿಗಳು ಯಾವುವು ಹಾಗೂ ಇವುಗಳ ಉದ್ದ (ಕಿ.ಮೀ) ಎಷ್ಟು; (ಸಂಪೂರ್ಣ ವಿವರ ನೀಡುವುದು) | ಪ್ರಾದೇಶಿಕ ಅಧಿಕಾರಿ, ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಹೆದ್ದಾರಿ–275ರಲ್ಲಿ 55.20 ಕಿ.ಮೀ.(74.200 ರಿಂದ ಕಿ.ಮೀ. 129.400 ವರೆಗೆ) ಮತ್ತು ರಾಷ್ಟ್ರೀಯ ಹೆದ್ದಾರಿ–209 ರಲ್ಲಿ 41.10 ಕಿ.ಮೀ. (355.54 ರಿಂದ ಕಿ.ಮೀ.397.64 ವರೆಗೆ) ಹಾಗೂ ರಾಷ್ಟ್ರೀಯ ಹೆದ್ದಾರಿ–75ರಲ್ಲಿ 26.30 ಕಿ.ಮೀ.(92.30 ಯಿಂದ ಕಿ.ಮೀ.118.60 ವರೆಗೆ) ಮಂಡ್ಯ ಜಿಲ್ಲೆಯ ಮೂಲಕ ಹಾದುಹೋಗುತ್ತೆಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ.<br><br>ರಾಷ್ಟ್ರೀಯ ಹೆದ್ದಾರಿ ವಲಯಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ಹೆದ್ದಾರಿ–150ಎ ರ ಸರಪಳಿ ಕಿ.ಮೀ.532.10 ರಿಂದ ಕಿ.ಮೀ.606.67 ರವರೆಗೆ ಒಟ್ಟು.74.54 ಕಿ.ಮೀ ಉದ್ದದ ರಸ್ತೆಯು ಮಂಡ್ಯ ಜಿಲ್ಲಾ ವ್ಯಾಪ್ತಿಯಲ್ಲಿ ಹಾದು ಹೋಗುತ್ತದೆ. |
| ಆ) | ಕಳೆದ ಮೂರು ವರ್ಷಗಳಲ್ಲಿ ಈ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಆಗಿರುವ ಅಪಘಾತಗಳ ಸಂಖ್ಯೆ ಎಷ್ಟು; ಗಾಯಗೊಂಡವರು ಮತ್ತು ಮೃತಪಟ್ಟವರ ಸಂಖ್ಯೆ ಎಷ್ಟು; (ವರ್ಷವಾರು, ರಾಷ್ಟ್ರೀಯ ಹೆದ್ದಾರಿವಾರು ಮಾಹಿತಿ ನೀಡುವುದು) | ಕಳೆದ ಮೂರು ವರ್ಷಗಳಲ್ಲಿ ರಾಷ್ಟ್ರೀಯ ಹೆದ್ದಾರಿ–275; ರಾಷ್ಟ್ರೀಯ ಹೆದ್ದಾರಿ–209 ಮತ್ತು ರಾಷ್ಟ್ರೀಯ ಹೆದ್ದಾರಿ–150ಎ ಗಳಲ್ಲಿ ಸಂಭವಿಸಿರುವ ಅಪಘಾತದ ವಿವರಗಳನ್ನು ಪೋಲೀಸ್ ಇಲಾಖೆ ಯವರು ಈ ಕೆಳಕಂಡಂತೆ ವರದಿಸಿರುತ್ತಾರೆ.<br><br>**ರಾಷ್ಟ್ರೀಯ ಹೆದ್ದಾರಿ–275** |

| Year | No. of Accidents | | | No. of Persons | |
|---|---|---|---|---|---|
| | Fatal | Non-Fatal | Total | Deaths | Injured |
| 2020 | 65 | 300 | 365 | 69 | 418 |
| 2021 | 64 | 273 | 337 | 69 | 364 |
| 2022 | 78 | 289 | 367 | 86 | 386 |
| 2023 (upto 10-07-2023) | 64 | 216 | 280 | 73 | 348 |
| Total | 271 | 1078 | 1349 | 297 | 1516 |

**ರಾಷ್ಟ್ರೀಯ ಹೆದ್ದಾರಿ–209**

| Year | No. of Accidents | | | No. of Persons | |
|---|---|---|---|---|---|
| | Fatal | Non-Fatal | Total | Deaths | Injured |
| 2020 | 23 | 46 | 69 | 28 | 72 |
| 2021 | 28 | 49 | 77 | 39 | 83 |
| 2022 | 34 | 53 | 87 | 41 | 79 |
| 2023 (upto 10-07-2023) | 15 | 31 | 6 | 23 | 59 |
| Total | 100 | 179 | 279 | 131 | 293 |

**ರಾಷ್ಟ್ರೀಯ ಹೆದ್ದಾರಿ–150(ಎ)**

| Year | No. of Accidents | | | No. of Persons | |
|---|---|---|---|---|---|
| | Fatal | Non-Fatal | Total | Deaths | Injured |
| 2020 | 27 | 98 | 125 | 30 | 135 |
| 2021 | 33 | 93 | 126 | 40 | 140 |
| 2022 | 41 | 130 | 171 | 45 | 180 |
| 2023 (upto 10-07-2023) | 20 | 79 | 99 | 21 | 117 |
| Total | 121 | 400 | 521 | 136 | 572 |

ಇ) ಈ ಹೆದ್ದಾರಿಗಳಲ್ಲಿನ ಯಾವುದಾದರೂ ಸ್ಥಳಗಳನ್ನು ಅಪಘಾತ ಸ್ಥಳ/ ವಲಯ ಎಂದು ಗುರುತಿಸಲಾಗಿದೆಯೇ:

ಕೇಂದ್ರ ಭೂ ಸಾರಿಗೆ ಮಂತ್ರಾಲಯ ರವರು ಮಂಡ್ಯ ಜಿಲ್ಲೆಯಲ್ಲಿ ರಾಷ್ಟ್ರೀಯ ಹೆದ್ದಾರಿ–275 ರಲ್ಲಿ ಮಂಡ್ಯ ಸಮೀಪ ಚೈನೇಜ್ 263.100 ರಲ್ಲಿ ಬಿಗ್‌ಬಜಾರ್ ಹತ್ತಿರ ಬ್ಲಾಕ್ ಸ್ಪಾಟ್‌ನ್ನು ಗುರುತಿಸಿರುತ್ತಾರೆ ಹಾಗೂ ದೀರ್ಘಾವಧಿಯ ಸರಿಪಡಿಸುವಿಕೆ ಯಡಿಯಲ್ಲಿ ಮಂಡ್ಯ ಪಟ್ಟಣದ ಬೈಪಾಸ್ ರಸ್ತೆಯನ್ನು ಸರಿಪಡಿಸಿ ಪೂರ್ಣಗೊಳಿಸಿದ್ದು, ಪ್ರಸ್ತುತ ಬ್ಲಾಕ್ ಸ್ಪಾಟ್‌ಗಳು ಯಾವುದೂ ಇರುವುದಿಲ್ಲ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ವರದಿಸಿರುತ್ತಾರೆ.

ಈ) ಹಾಗಿದ್ದಲ್ಲಿ, ಪ್ರಯಾಣಿಕರ ಸುರಕ್ಷತೆಗಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು? (ವಿವರ ನೀಡುವುದು)

IRC ಮಾರ್ಗಸೂಚಿಗಳ ಪ್ರಕಾರ ರಾಷ್ಟ್ರೀಯ ಹೆದ್ದಾರಿ–275ರ ಬೆಂಗಳೂರಿನಿಂದ–ಮೈಸೂರು ವಿಭಾಗದಲ್ಲಿ ಸುರಕ್ಷಿತ ಸಂಚಾರಕ್ಕಾಗಿ ಎಲ್ಲಾ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಬೆಂಗಳೂರು – ಮೈಸೂರು ಹೆದ್ದಾರಿಯಲ್ಲಿ ಅಪಘಾತಗಳನ್ನು ಗಮನದಲ್ಲಿಟ್ಟುಕೊಂಡು ಕೆಳಕಂಡ ಹೆಚ್ಚುವರಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ.

1) ಹೆಚ್ಚುವರಿ ವೇಗ ಮಿತಿ ಸೈನ್‌ಬೋರ್ಡ್‌ಗಳನ್ನು ಅಳವಡಿಸಲಾಗಿದೆ.
2) ಪ್ರತಿ ಪ್ರವೇಶ ನಿರ್ಗಮನ ಸ್ಥಳದಲ್ಲಿ PTZ Camera ಗಳನ್ನು ಅಳವಡಿಸಲಾಗಿರುತ್ತದೆ.
3) ಲೇನ್ ಶಿಸ್ತು ಗುರುತುಗಳು ಮತ್ತು ಸೈನ್‌ಬೋರ್ಡ್‌ಗಳನ್ನು ಅಳವಡಿಸಲಾಗಿದೆ.

| | | |
|---|---|---|
| | | 4) ಹೆದ್ದಾರಿಯಲ್ಲಿ ನೀರು ನಿಲ್ಲುವುದನ್ನು ತಪ್ಪಿಸಲು ಚರಂಡಿಗಳನ್ನು ನಿಯಮಿತವಾಗಿ ಸ್ವಚ್ಛಗೊಳಿಸಲು ಕ್ರಮ ಕೈಗೊಳ್ಳಲಾಗಿದೆ.<br>5) ಸೇವಾ ರಸ್ತೆಗಳ ಪ್ರವೇಶ ನಿರ್ಗಮನ ಸ್ಥಳಗಳ ಬಳಿ ಸ್ಪೀಡ್ ಬ್ರೇಕರ್ ನಿರ್ಮಿಸಲಾಗಿದೆ.<br>6) ಹೆದ್ದಾರಿಯುದ್ದಕ್ಕೂ 24x7 ಹೆದ್ದಾರಿ ಗಸ್ತು ಮತ್ತು ಅಂಬುಲೆನ್ಸ್ ಸೌಲಭ್ಯ ಒದಗಿಸಲಾಗಿದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರರವರು ವರದಿಸಿರುತ್ತಾರೆ. |

**ಸಂಖ್ಯೆ: ಲೋಇ 146 ಸಿಎನ್‌ಹೆಚ್ 2023(ಇ)**

**(ಸತೀಶ ಜಾರಕಿಹೊಳಿ)**
**ಲೋಕೋಪಯೋಗಿ ಸಚಿವರು,**